ಕೂಡ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ನಂಜಾಮರಿ: ಸಾಕಷ್ಟು ಔಷಧಿ ಸಿಗುತ್ತಿಲ್ಲ. ದಯವಿಟ್ಟು ಅದನ್ನು ಜಾಸ್ತಿ ಮಾಡಿಕೊಡಬೇಕು.

ಉಪಾಧ್ಯಕ್ಷರು: ಸಾಕುಬಿಡಿ.

(ಒ) ಕರ್ನಾಟಕ ಆಗ್ರೋ ಇಂಡಸ್ಟ್ರಿಸ್‌ನ ನೌಕರರ ಸ್ಥಿತಿಗತಿ

+ ಶ್ರೀ ಜೆ.ಬಿ.ಶಿವಕುಮಾರ್ (ಕುರುಗೋಡು): ಮಾನ್ಯ ಉಪಾಧ್ಯಕ್ಷರೇ, ಈಗ ಎಲ್ಲರಿಗೂ ತಿಳಿದಿರುವ ಹಾಗೆ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್‌ನ ನೌಕರರ ಸ್ಥಿತಿಗತಿ ಏನು ಇದೆಯೆಂದು ಮಾನ್ಯ ಕೃಷಿ ಸಚಿವರು ಬಲ್ಲರು. ಕಳೆದ ಎರಡು-ಮೂರು ತಿಂಗಳಿಂದ ಅಲ್ಲಿರುವ ಬಡ ನೌಕರರಿಗೆ ಸಂಬಳವನ್ನು ಪಾವತಿ ಮಾಡದೆ ಅವರ ಕುಟುಂಬಗಳು ಎಷ್ಟು ಕಷ್ಟಕ್ಕೆ ಸಿಲುಕಿದೆ ಎನ್ನುವುದನ್ನು ಅವರು ಕೂಡ ತಿಳಿದುಕೊಂಡಿದ್ದಾರೆ. ಅವರು ಕೃಷಿ ಸಚಿವರಾದಮೇಲೆ ಈ ಒಂದು ಸಂಸ್ಥೆ ಏನಿದೆ, ಅದರ ಸ್ಥಿತಿಗತಿಗಳನ್ನು ಉತ್ತಮ ಮಾಡುವುದಕ್ಕೆ ಅವರು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಯಸಶ್ವಿಯೂ ಆಗಿದ್ದಾರೆ. ಆದರೆ ಹುಚ್ಚಿಮದುವೆಯಲ್ಲಿ ಉಂಡವರೇ ಜಾಣ ಎಂದು ಹೇಳುತ್ತಾರೆ. ಯಾರೋ ಕೆಲವು ಭ್ರಷ್ಟ ಅಧಿಕಾರಿಗಳು ಆ ಸಂಸ್ಥೆಯಲ್ಲಿ ಮಾಡಿದಂಥ ವ್ಯವಹಾರಗಳಿಂದಾಗಿ ಇವತ್ತು ಆ ಸಂಸ್ಥೆಗೆ 78 ಕೋಟಿ ರೂಪಾಯಿಗಳು ನಷ್ಟವಾಗಿದೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಆದರೆ ಇದನ್ನು ನಂಬಿರುವಂಥ ಬಡ ಕಾರ್ಮಿಕರ ಭವಿಷ್ಯ ಏನಾಗಬೇಕು? ಸರ್ಕಾರ ಅವರ ನೆರವಿಗೆ ಬರಬೇಕು ಎಂದು ತಮ್ಮ ಮೂಲಕ ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ವಿರೋಧ ಪಕ್ಷದಲ್ಲಿದ್ದಾಗಲೂ ಕೂಡ ಈ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಮಗೆ ಒಂದು ವಿಶ್ವಾಸ ಇದೆ. ಅವರ ಆಡಳಿತ ಕಾಲದಲ್ಲಿ ಅದಕ್ಕೆ ಪುನಶ್ಚೇತನಗೊಳಿಸುತ್ತಾರೆ ಎನ್ನುವ ನಂಬಿಕೆ ಇದೆ. ಆದ್ದರಿಂದ ತಕ್ಷಣಕ್ಕೆ ಆ ನೌಕರ ಕುಟುಂಬವರ್ಗದವರಿಗೆ ಜೀವನೋಪಾಯಕ್ಕಾಗಿ ಅವರಿಗೆ ಸಂಬಳ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಇತ್ತೀಚಿನವರೆಗೂ ಅದರ ಅಧ್ಯಕ್ಷರಾಗಿದ್ದ ಮಾನ್ಯ ಲಕ್ಷ್ಮಯ್ಯ ಅವರಿಗೆ ಕೂಡ ಅದರ ಆಡಳಿತದ ಬಗ್ಗೆ ಸಾಕಷ್ಟು ಗೊತ್ತಿದೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ತಮ್ಮ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುವುದು ಇಷ್ಟೇ. ಪ್ರಾಯಶಃ ನಿನ್ನೆಯ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಈ ಬಗ್ಗೆ ಪ್ರಸ್ತಾಪವಾಗಿದೆ ಎಂದು ಹೇಳಿದ್ದಾರೆ. ನೌಕರರ ದೃಷ್ಟಿಯಿಂದ, ಅವರ ಕುಟುಂಬವರ್ಗದವರ ದೃಷ್ಟಿಯಿಂದ ಅವರಿಗೆ ನೆರವು ಸಿಗಬೇಕು ಎನ್ನತಕ್ಕಂಥಾದ್ದು ನನ್ನ ಪ್ರಾರ್ಥನೆ.

ಶ್ರೀ ಸಿ.ಬೈರೇಗೌಡ (ಕೃಷಿಮಂತ್ರಿ): ಮಾನ್ಯ ಉಪಾಧ್ಯಕ್ಷರೇ, ಕೃಷಿ ಕೈಗಾರಿಕಾ ನಿಗಮವನ್ನು ಪುನರ್ಚೇತನಗೊಳಿಸಬೇಕೆನ್ನುವ ಪ್ರಸ್ತಾವ ಸಚಿವಸಂಪುಟದ ಮುಂದೆ ಇದೆ. ಇವತ್ತು ಕೂಡ ಸಚಿವಸಂಪುಟ ಸಭೆಯಲ್ಲಿ ಅದು ಇತ್ತು. ಆದರೆ ನಾವು ಪೂರ್ತಿಯಾಗಿ ಅವುಗಳನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈ ವಿಚಾರ ಸಚಿವಸಂಪುಟದ ಪರಿಶೀಲನೆಯಲ್ಲಿದೆ ಎಂದು ಇಷ್ಟುಮಾತ್ರ ಈ ಸಂದರ್ಭದಲ್ಲಿ ಹೇಳುತ್ತಾ ನಾನು ಎಲ್ಲ ವಿಚಾರಗಳನ್ನು ಸಚಿವಸಂಪುಟ ಸಭೆಯ ಮುಂದೆ ಇಟ್ಟಿದ್ದೇನೆ. ಸಚಿವಸಂಪುಟ ಏನು ತೀರ್ಮಾನ ಮಾಡುತ್ತದೆ ಅದನ್ನು ಕಾರ್ಯಗತ ಮಾಡುತ್ತೇವೆ ಎಂದು ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಜಿ.ಬಿ.ಶಿವಕುಮಾರ್: ಕಳೆದ ಮೂರು ತಿಂಗಳಿಂದ ಅವರಿಗೆ ಸಂಬಳ ಕೊಟ್ಟಿಲ್ಲ. ಅವರೂ ಮನುಷ್ಯರು ತಾನೆ? ಕೋಟ್ಯಾಂತರ ರೂಪಾಯಿ ಹೊಡೆದುಕೊಂಡು ಹೋದವರೆಲ್ಲ ಹೋದರು.

ಶ್ರೀ ಎಸ್.ಆರ್.ಲಕ್ಷ್ಮಯ್ಯ: ಮಾನ್ಯ ಉಪಾಧ್ಯಕ್ಷರೇ, ಆ ನಿಗಮಕ್ಕೆ ಮಾನ್ಯ ಕೃಷಿ ಸಚಿವರು ಮತ್ತು ಮುಖ್ಯಮಂತ್ರಿಗಳು ಸೇರಿ ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ನಾನು ನಾಲ್ಕಾರು ತಿಂಗಳು ಅಲ್ಲಿದ್ದೆ. ಈಗ ನಾನು ರಾಜೀನಾಮೆ ಕೊಟ್ಟು ನಾಲ್ಕು ತಿಂಗಳಾಯಿತು. ಕಾರಣ ಇಷ್ಟೇ, ಬಹಳ ಹಿಂದೆ ಎಸ್.ಎ.ಎಸ್. ಎಂದು ಇತ್ತು. ಅದು ಮುಚ್ಚಿದಮೇಲೆ ಅಲ್ಲಿರುವ ನೌಕರರನ್ನು ತಂದು ಇಲ್ಲಿ ತುಂಬಿದರು. ಅಲ್ಲಿ ಈಗ 1200 ಜನ ಕೆಲಸಗಾರರು ಇದ್ದಾರೆ. ಅವರ ಕೈಗೆ ಕೆಲಸ ಇಲ್ಲ. ಸುಮ್ಮನೆ ಗಂಟು ತಿಂದಿದ್ದಾರೆ ಎಂದರೆ ಅವರು ಏನು ತಿಂದಿದ್ದಾರೆ? ತಿಂದವರನ್ನು ಜೈಲಿಗೆ ಕಳಿಸಲಿ, ನಾನು ಬೇಡವೆಂದು ಹೇಳುವುದಿಲ್ಲ. ಆ ಬಡವರು ದುಡಿಯತಕ್ಕಂಥ ದುಡ್ಡಿನಲ್ಲಿ ನಾನು ಟಿ.ಎ, ಡಿ.ಎ. ತೆಗೆದುಕೊಳ್ಳುವುದರ ಬಗ್ಗೆ ನಾಚಿಕೆಯಾಗಿ ನಾನು ರಾಜೀನಾಮೆ ಕೊಟ್ಟಿದ್ದೇನೆ. ಈಗ ಅವರನ್ನು ಏನು ಮಾಡುತ್ತೀರಿ? ಈಗ ಅವರಿಗೆ ದುಡ್ಡುಕೊಟ್ಟು ಕಂಪಲ್ಸರಿ ರಿಟೈರ್‌ಮೆಂಟ್ ಕೊಟ್ಟು ಮನೆಗೆ ಕಳಿಸಿ. ಹೀಗೆ ಮಾಡಿ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡಬಹುದು. ಆಗ ಸಂಸ್ಥೆ ಅಭಿವೃದ್ಧಿಯಾಗಿಯೇ ಆಗುತ್ತದೆ. ಈಗ 1350 ಜನ ಕೆಲಸ ಮಾಡುತ್ತಿದ್ದು, ಅವರಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲವೆಂದರೆ ಹೇಗೆ? ಮೂರು ತಿಂಗಳಿಗೊಂದು ಸಲ ಸಂಬಳ ಕೊಟ್ಟರೆ, ಅವರ ಹೆಂಡತಿ ಮಕ್ಕಳು ಹೇಗೆ ಜೀವನ ಮಾಡುತ್ತಾರೆ? ಅವರಿಗೆ ನಾಚಿಕೆ ಇದ್ದರೆ ರಾಜಿನಾಮೆ ಕೊಟ್ಟು ಹೋಗಬೇಕು. ಅದಕ್ಕಾಗಿ ಮಾನ್ಯಮಂತ್ರಿಗಳು, ಇದರ ಬಗ್ಗೆ ನಿಗಾ ತೆಗೆದುಕೊಂಡು ಮಾಡುತ್ತಾರೆಂದು ನಾನು ಅಶಿಸುತ್ತೇನೆ.

ಶ್ರೀ ಸಿ.ಬೈರೇಗೌಡ: ನಾನು ಈಗಾಗಲೇ ಹೇಳಿದ್ದೇನೆ. ಈ ವಿಷಯ ಸಚಿವ ಸಂಪುಟದ ಮುಂದೆ ಇದೆ. ಅಲ್ಲಿ ಏನು ತೀರ್ಮಾನವಾಗುತ್ತದೋ, ಆ ತೀರ್ಮಾನದ ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.